**ದಿನಾಂಕಃ 17.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಂದುವರಿದ ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ವಕೀಲರಿಂದಃ**

ಇಲ್ಲ ಎಂದಿದ್ದಾರೆ.

**ಪಾಟೀ ಸವಾಲು:** ಅರ್ಜಿದಾರರ **ಪರ ವಕೀಲರಿಂದಃ**

1) ಅಪಘಾತ ಮೃತ ವೆಂಕಟೇಶಪ್ಪ ನವರ ತಪ್ಪಿನಿಂದ ಆಗಿದೆ ಎಂದು ತೋರಿಸುವುದಕ್ಕೆ ನಾವು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಅಪಘಾತ ಸಂಪೂರ್ಣವಾಗಿ ಕೆಎ-**07**-ಇಜಿ-**6793** ಹೋಂಡಾ ಆ್ಯಕ್ಟಿವಾ ದ್ವಿಚಕ್ರ ವಾಹನದ ಸವಾರನ ತಪ್ಪಿನಿಂದಲೇ ಆಗಿದೆ ಎಂದರೆ ಸರಿಯಲ್ಲ. ಇದೇ ಕಾರಣದಿಂದ ಪೋಲಿಸರು ಸದರಿ ಸವಾರನ ವಿರುದ್ಧ ಮಾತ್ರ ದೋಷಾರೋಪಣ ಪಟ್ಟಿಯನ್ನು ಮಾತ್ರ ಸಲ್ಲಿಸಿದ್ದಾರೆ ಎಂದರೆ, ಸರಿಯಾದ ತನಿಖೆ ನಡೆಸದೆ ಸದರಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ. ಕೆಎ-**07**-ಇಜಿ-**6793** ಹೋಂಡಾ ಆ್ಯಕ್ಟಿವಾ ದ್ವಿಚಕ್ರ ವಾಹನದ ಸವಾರನ ಬಳಿ ಚಾಲನಾ ಪರವಾನಗಿ ಇತ್ತು ಎಂದರೆ ಸರಿ.

2) ನಾನು ಪರಿಹಾರ ಕೋಡುವ ನಮ್ಮ ಬಾದ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: 1 ನೇ ಎದುರುದಾರ ಪರ ವಕೀಲರಿಂದಃ</u>**

1 ನೇ ಎದುರುದಾರರು ಅರ್ಜಿದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ಕೋರಿದ್ದಾರೆ.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.